# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 875
ಉತ್ತರಿಸಬೇಕಾದ ದಿನಾಂಕ : 14.07.2023
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯುವ ಸಬಲೀಕರಣಕ್ಕಾಗಿ ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಯುವ ಸಬಲೀಕರಣಕ್ಕಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ:-<br><br>1. **ಯುವಜನೋತ್ಸವ**: ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿ, ರಾಜ್ಯ ಮಟ್ಟದ ವಿಜೇತರನ್ನು ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವದ ಅಂಗವಾಗಿ ನಡೆಯುವ ರಾಷ್ಟ್ರೀಯ ಯುವಜನೋತ್ಸವಕ್ಕೆ ನಿಯೋಜಿಸುವುದು.<br>2. **ಯುವಜನ ಮೇಳ**: ಯುವಜನರು ಜಾನಪದ ಕಲೆಯನ್ನು ಉಳಿಸಿ, ಬೆಳೆಸಲು ಪೂರಕವಾಗುವಂತೆ 17 ವಿವಿಧ ಪ್ರಕಾರಗಳ ಜನಪದ ಸ್ಪರ್ಧೆಗಳನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಆಯೋಜಿಸುವುದು.<br>3. **ಯುವ ಶಕ್ತಿ ಕೇಂದ್ರ**: ಯುವಜನರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಇಲಾಖಾ ಕ್ರೀಡಾಂಗಣಗಳು, ಕ್ರೀಡಾ ವಸತಿ ನಿಲಯಗಳು, ಸರ್ಕಾರಿ ಕಾಲೇಜುಗಳಿಗೆ ಮತ್ತು ಪೋಲೀಸ್ ತರಬೇತಿ ಶಾಲೆಗಳಿಗೆ ಜಿಮ್ ಉಪಕರಣಗಳನ್ನು ಒದಗಿಸಲಾಗುವುದು.<br>4. **ನಮ್ಮೂರ ಶಾಲೆಗೆ ನಮ್ಮ ಯುವಜನರು**: ಈ ಕಾರ್ಯಕ್ರಮದಡಿ ಕ್ರೀಡಾ ಕ್ಷೇತ್ರದಡಿ ಸಾಧನೆ ಮಾಡಿದ ಸರಕಾರಿ ಶಾಲೆಯ ಕ್ರೀಡಾ ಚಟುವಟಿಕೆಗಳ ಪ್ರೋತ್ಸಾಹಕ್ಕಾಗಿ ಕ್ರೀಡಾ ಸಾಮಗ್ರಿಗಳನ್ನು ಪೂರೈಸಿಕೊಳ್ಳಲು ಪ್ರೋತ್ಸಾಹಧನ ಮತ್ತು ದೈಹಿಕ ಶಿಕ್ಷಕರ ಗೌರವಧನ ನೀಡಲಾಗುವುದು.<br>5. **ಯುವ ಸಹಾಯವಾಣಿ:** ಯುವಜನರಿಗೆ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಲು ವರ್ಷದ 365 ದಿನವೂ ಕಾರ್ಯನಿರ್ವಹಿಸುವ " **ಯುವ ಸಹಾಯವಾಣಿ** " ಯನ್ನು ಅನುಷ್ಠಾನಗೊಳಿಸಲಾಗಿದೆ.<br>6. **ಸ್ವಾಮಿ ವಿವೇಕಾನಂದ ಯುವ ಶಕ್ತಿ** ಯೋಜನೆಯಡಿ ಸ್ವಾಮಿ ವಿವೇಕಾನಂದ ಯುವಕರ ಜಂಟಿ ಬಾಧ್ಯತಾ ಗುಂಪುಗಳನ್ನು ಪ್ರತಿ ಗ್ರಾಮ ಪಂಚಾಯಿತಿಗೆ 2 ರಂತೆ ರಚನೆ ಮಾಡಿ ಯುವಕರನ್ನು ಕಿರು ಉದ್ಯಮ ಸ್ಥಾಪಿಸುವ ಮೂಲಕ ಆರ್ಥಿಕ ಸದೃಢರನ್ನಾಗಿ ಮಾಡುವುದು. |

→

| | | |
|---|---|---|
| | | 7. **ಕ್ರೀಡಾ ವಸತಿ ಶಾಲೆ/ ನಿಲಯಗಳು:** ರಾಜ್ಯದಲ್ಲಿ ಒಟ್ಟು 34 ಕ್ರೀಡಾ ವಸತಿ ಶಾಲೆಗಳಿದ್ದು, ಪ್ರವೇಶ ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ವಿವಿಧ ಕ್ರೀಡೆಗಳಲ್ಲಿ ಉಚಿತ ಕ್ರೀಡಾ ತರಬೇತಿ, ಊಟೋಪಹಾರ, ವಸತಿ, ಮತ್ತು ಕ್ರೀಡಾ ಸಮವಸ್ತ್ರ ಒದಗಿಸಲಾಗುತ್ತಿದೆ. ದೈಹಿಕ ಕ್ಷಮತಾ ಪರೀಕ್ಷೆಗಳಲ್ಲಿ ಹಾಗೂ ಕ್ರೀಡಾ ಕೌಶಲ್ಯ ಪರೀಕ್ಷೆ ಆಧಾರಿತವಾಗಿ 5ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.<br>8. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ವತಿಯಿಂದ ಭೂ ಸಾಹಸ, ಜಲಸಾಹಸ, ಹಾಗೂ ವಾಯು ಸಾಹಸ ಕಾರ್ಯಕ್ರಮಗಳನ್ನು ಯುವಜನರಿಗೆ ಸಂಘಟಿಸಲಾಗುತ್ತಿದೆ |
| **ಆ)** | ಯುವಜನತೆಯು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸರ್ಕಾರವು ಯೋಜಿಸಿರುವ ಕಾರ್ಯಕ್ರಮಗಳೇನು: ಗ್ರಾಮೀಣ ಕ್ರೀಡೆಗಳು ಗ್ರಾಮೀಣ ಕ್ರೀಡಾಪಟುಗಳನ್ನು ಉತ್ತೇಜನಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಕ್ರಮಗಳನ್ನು ಕೈಗೊಂಡಿದೆಯೇ: (ಸಂಪೂರ್ಣ ಮಾಹಿತಿ ನೀಡುವುದು) | ಯುವಜನತೆಯು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸರ್ಕಾರವು ಯೋಜಿಸಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿದೆ.<br>1. **ಕ್ರೀಡಾ ಮೂಲ ಸೌಕರ್ಯಗಳ ಸೃಜನೆ:** ಕ್ರೀಡಾ ಮೂಲಭೂತ ಸೃಜನೆಗೆ ಪ್ರಸ್ತುತ 29 ಜಿಲ್ಲಾ ಕ್ರೀಡಾಂಗಣಗಳು,123 ತಾಲ್ಲೂಕು ಕ್ರೀಡಾಂಗಣಗಳು, 57 ಒಳಾಂಗಣ ಕ್ರೀಡಾಂಗಣಗಳು ಮತ್ತು 33 ಈಜುಕೊಳಗಳನ್ನು ನಿರ್ಮಾಣ ಮಾಡಲಾಗಿದೆ.<br>2. **ಕ್ರೀಡಾ ವಸತಿ ಶಾಲೆ / ನಿಲಯಗಳು:** ರಾಜ್ಯದಲ್ಲಿ ಕ್ರೀಡಾ ಉತ್ತೇಜನಕ್ಕಾಗಿ ಒಟ್ಟು 34 ಕ್ರೀಡಾ ವಸತಿ ನಿಲಯಗಳು ಮತ್ತು 02 ಸರ್ಕಾರಿ ಕ್ರೀಡಾ ಶಾಲೆಗಳನ್ನು ಸೃಜಿಸಲಾಗಿದೆ.<br>3. **ಕಬಡ್ಡಿ ಮ್ಯಾಟ್:** ಪ್ರತಿ ಜಿಲ್ಲೆಗೆ ತಲಾ 2 ರಂತೆ ಆಧುನಿಕ ಕಬಡ್ಡಿ ಮ್ಯಾಟ್ ಗಳನ್ನು ಹಂಚಿಕೆ ಮಾಡಲಾಗಿದ್ದು, ಕ್ರೀಡಾಪಟುಗಳ ಬಳಕೆಯಲ್ಲಿದೆ.<br>4. **ದಸರಾ ಸಿ.ಎಂ. ಕಪ್:** ದಸರಾ ಸಿ.ಎಂ. ಕಪ್ ಕ್ರೀಡಾಕೂಟವನ್ನು ಪ್ರತಿ ವರ್ಷ ತಾಲ್ಲೂಕು, ಜಿಲ್ಲೆ, ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟವನ್ನು ಮಹಿಳೆಯರಿಗೆ ಮತ್ತು ಪುರುಷರಿಗೆ ಮುಕ್ತ ವಿಭಾಗದಲ್ಲಿ ಆಯೋಜಿಸಲಾಗುತ್ತಿದೆ.<br>5. **ಗರಡಿ ಮನೆ:** ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜಿಸುವ ಸಲುವಾಗಿ ಗರಡಿ ಮನೆ ನಿರ್ಮಣ ಮತ್ತು ನವೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.<br>6. **ಕುಸ್ತಿ ಹಬ್ಬ:** ಕುಸ್ತಿ ಕ್ರೀಡೆಯನ್ನು ಹಾಗೂ ಮಣ್ಣಿನ ಕುಸ್ತಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕುಸ್ತಿ ಹಬ್ಬವನ್ನು ಆಯೋಜಿಸಲಾಗುತ್ತದೆ. ಭಾರತೀಯ ಮಣ್ಣಿನ ಕುಸ್ತಿ ಸಂಸ್ಥೆಯ ಮಾರ್ಗಸೂಚಿಯಂತೆ ದೇಹ ತೂಕದ ಆಧಾರದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ.<br><br>ಪ್ರತಿಭಾನ್ವಿತ ಗ್ರಾಮೀಣ ಯುವ ಕ್ರೀಡಾಪಟುಗಳ ಉತ್ತೇಜನಕ್ಕಾಗಿ ಗ್ರಾಮಪಂಚಾಯ್ತಿ ಮಟ್ಟದಿಂದ ರಾಜ್ಯಮಟ್ಟದವರೆಗೆ 2022-23ನೇ ಸಾಲಿನಲ್ಲಿ ಕಬಡ್ಡಿ, ಕುಸ್ತಿ, ಖೋ-ಖೋ, ವಾಲಿಬಾಲ್, ಯೋಗ, ಕಂಬಳ ಎತ್ತಿನಬಂಡಿ |

<table>
<tr><td></td><td></td><td>ಸ್ಪರ್ಧೆಗಳಲ್ಲಿ ಗ್ರಾಮೀಣ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ.<br><br>ಇಲಾಖಾ ವತಿಯಿಂದ ಗ್ರಾಮೀಣ ಕ್ರೀಡೆಗಳಾದ ಖೋ-ಖೋ, ಕಬಡ್ಡಿ, ಥ್ರೋಬಾಲ್, ಆಟ್ಯಾ-ಪಾಟ್ಯಾ, ಮಲ್ಲಕಂಭ, ಬಾಲ್ ಬ್ಯಾಡ್ಮಿಂಟನ್, ಯೋಗ, ಗುಂಡು ಎತ್ತುವುದು, ದೊಣ್ಣೆ ವರಸೆ, ಮಟ್ಟಿ ಕುಸ್ತಿ,/ಜಂಗಿ ಕುಸ್ತಿ, ಟೆನ್ನಿಕಾಯ್ಟ್, ಕೇರಂ, ಕಂಬಳ ಕ್ರೀಡೆಗಳಲ್ಲಿ ಸಾಧಕ ಕ್ರೀಡಾಪಟುಗಳಿಗೆ ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.</td></tr>
<tr><td>ಇ)</td><td>ವಿವಿಧ ಕ್ರೀಡೆಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದಿರುವ ಕ್ರೀಡಾಪಟುಗಳಿಗೆ ಸರ್ಕಾರದಿಂದ ವಿಶೇಷ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ;<br>ಹಾಗಿದ್ದಲ್ಲಿ, ಕಳೆದ 3 ವರ್ಷಗಳ ಸೌಲಭ್ಯಗಳ ಸಂಪೂರ್ಣ ವಿವರ ಹಾಗೂ ಪ್ರಯೋಜನ ಪಡೆದ ಕ್ರೀಡೆ ಹಾಗೂ ಕ್ರೀಡಾಪಟುಗಳ ಸಂಪೂರ್ಣ ಮಾಹಿತಿ ನೀಡುವುದು?</td><td>ವಿವಿಧ ಕ್ರೀಡೆಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತರಾದ ರಾಜ್ಯದ ಕ್ರೀಡಾಪಟುಗಳಿಗೆ ನಗದು ಪುರಸ್ಕಾರವನ್ನು ಸರ್ಕಾರಿ ಆದೇಶದಂತೆ ಕೆಳಕಂಡಂತೆ ನೀಡಲಾಗುತ್ತಿದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ವಿವರ</th><th>ಚಿನ್ನ</th><th>ಬೆಳ್ಳಿ</th><th>ಕಂಚು</th></tr>
<tr><td>1</td><td>ಒಲಂಪಿಕ್ /ಪ್ಯಾರಾಲಿಂಪಿಕ್</td><td>500.00</td><td>300.00</td><td>200.00</td></tr>
<tr><td>2</td><td>ಏಷಿಯನ್ ಗೇಮ್ಸ್</td><td>25.00</td><td>15.00</td><td>8.00</td></tr>
<tr><td>3</td><td>ಕಾಮನ್ -ವೆಲ್ತ್ ಗೇಮ್ಸ್</td><td>25.00</td><td>15.00</td><td>8.00</td></tr>
<tr><td>4</td><td>ವರ್ಲ್ಡ್ ಕಪ್ / ಚಾಂಪಿಯನ್ ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು)</td><td>5.00</td><td>3.00</td><td>2.00</td></tr>
</table>
ವಿವಿಧ ಕ್ರೀಡೆಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ತಂದಿರುವ ಕ್ರೀಡಾಪಟುಗಳಿಗೆ ಸರ್ಕಾರದಿಂದ ವಿಶೇಷ ಸೌಲಭ್ಯಗಳನ್ನು ನೀಡಲಾಗುತ್ತಿದೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
</table>

**ಸಂಖ್ಯೆ: ವೈಎಸ್‌ಡಿ-ಇಪಿಇ/152/2023**

(ಬಿ. ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

# ಅನುಬಂಧ

| ಕ್ರ. ಸಂ | ಕ್ರೀಡಾಪಟುವಿನ ಹೆಸರು | ಕ್ರೀಡೆಯ ಹೆಸರು | ವರ್ಷ | ಕ್ರೀಡಾಕೂಟದ ವಿವರ | ಮೊತ್ತ (ರೂ.ಲಕ್ಷ ಗಳಲ್ಲಿ) |
|---|---|---|---|---|---|
| 1 | ಅದಿತಿ ಅಶೋಕ್, | ಗಾಲ್ಫ್, | 2021 | ಟೋಕಿಯೋ ಒಲಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ -2020ರಲ್ಲಿ ಕರ್ನಾಟಕದಿಂದ ಆಯ್ಕೆಯಾದ ಕ್ರೀಡಾಪಟುಗಳಿಗೆ ತಲಾ ರೂ.10.00ಲಕ್ಷದಂತೆ ನಗದು ಪ್ರೋತ್ಸಾಹ ನೀಡಲಾಗಿದೆ. | 10.00 |
| 2 | ಶ್ರೀನಟರಾಜ್ | ಈಜು | | | 10.00 |
| 3 | ಫೌವಾದ್ ಮಿರ್ಜಾ | ಈಕ್ವೆಸ್ಟ್ರೀಯನ್ | | | 10.00 |
| 4 | ಶಕೀನ ಖಾತುನ್ | ಪ್ಯಾರಾ ಪವರ್ ಲಿಫ್ಟಿಂಗ್ | | | 10.00 |
| 5 | ನಿರಂಜನ್ ಎಂ | ಪ್ಯಾರಾ ಈಜುಪಟು | | | 10.00 |
| 6 | ಪ್ರಿಯಾ.ಹೆಚ್.ಮೋಹನ್ | ಅಥ್ಲೆಟಿಕ್ಸ್ | 2021 | ನೈರೋಬಿ, ಕೀನ್ಯಾದಲ್ಲಿ ನಡೆದ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ನಲ್ಲಿ ಬೆಳ್ಳಿ ಪದಕ | 5.00 |
| 7 | ಗುರುರಾಜ್ ಪೂಜಾರಿ | ಭಾರ ಎತ್ತುವುದು ಕಂಚಿನ ಪದಕ | 2022 | ಬರ್ನಿಂಗ್ ಹ್ಯಾಮ್ ನಲ್ಲಿ ನಡೆದ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಪದಕ ಪಡೆದ ಕ್ರೀಡಾಪಟುಗಳಿಗೆ ನಗದು ಪ್ರೋತ್ಸಾಹ ನೀಡಲಾಗಿದೆ. | 8.00 |
| 8 | ಅಶ್ವಿನಿ ಪೊನ್ನಪ್ಪ | ಬ್ಯಾಡ್ಮಿಂಟನ್, ಬೆಳ್ಳಿ ಪದಕ | | | 15.00 |
| 9 | ರಾಜೇಶ್ವರಿ ಗಾಯಕವಾಡ | ಕ್ರಿಕೆಟ್, ಬೆಳ್ಳಿ ಪದಕ | | | 15.00 |
| 10 | ಲಕ್ಷ್ಯ ಸೇನ್ | ಬ್ಯಾಡ್ಮಿಂಟನ್ | 2022 | ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿರುವ ಅರ್ನೋಮಾ ಗ್ರ್ಯಾಂಡ್ ನಲ್ಲಿ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. | 5.00 |
| 11 | ಪ್ರೇರಣಾ ನಂದಕುಮಾರ್ ಶೇಟ್ | ಬ್ಯಾಡ್ಮಿಂಟನ್, | 2022 | ನಾರ್ಮಂಡಿ ,ಫ್ರಾನ್ಸ್ ನಲ್ಲಿ ಜರುಗಿದ 19 ನೇ ಐ.ಎಸ್.ಎಫ್.ಐ ವಿಶ್ವ ದಾಖಲೆಯ ಜಿಮ್ನಾಫೈಡ್ಟೂರ್ನಿಯಲ್ಲಿ ಭಾರತದ ಪರವಾಗಿ ಭಾಗವಹಿಸಿ ಚಿನ್ನದ ಪದಕ ಪಡೆದಿರುತ್ತಾರೆ. | 2.00 |
| 12 | ಚಾರ್ವಿ ಎ. | ಚೆಸ್ | 2022 | ಜಾರ್ಜಿಯ ದೇಶದಲ್ಲಿ ನಡೆದ ವಿಶ್ವ ಕೆಡೆಟ್ಸ್ ಚೆಸ್ ಚಾಂಪಿಯನ್ ಷಿಪ್ - 2022 ರಲ್ಲಿ ಭಾಗವಹಿಸಿ ಯು-8 ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. | 5.00 |
| 13 | ಪ್ರಣವ್ ಆನಂದ್ | ಚೆಸ್ | 2022 | ವರ್ಲ್ಡ್ ಯೂತ್ (U-16) ಚಾಂಪಿಯನ್ ಷಿಪ್ ಯುನೈಟೆಡ್ ಸ್ಟೇಟ್ಸ್ ನಲ್ಲಿ, ಒರೆಗಾನ್, ಯುಜೀನ್ ನಲ್ಲಿರುವ ಹೇವರ್ಡ್ ಫೀಲ್ಡ್ ನಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. | 10.00 |